# DEPT OF HISTORY
# SPECIAL LECTURE

**30-12-2019**

**ಪ್ರಕಟಣೆಯ ಕೃಪೆಗಾಗಿ**

**"ಇತಿಹಾಸ ರಚನೆಯಲ್ಲಿ ವಿಭಾಗೀಯ ಪತ್ರಾಗಾರ ದಾಖಲೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ"**

**- ಡಾ. ಗವಿಸಿದ್ಧಯ್ಯ**

"ಒಬ್ಬ ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗೂ ದಾಖಲೆಗಳು ಅವನ ಬದುಕಿನಲ್ಲಿ ಎಷ್ಟು ಮಹತ್ವವಾಗಿದೆ ಎಂದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಅದೇರೀತಿ ನಮ್ಮಭವ್ಯ ಭಾರತದ ಪಾರಂಪರಿಕ ಚಾರಿತ್ರ್ಯದ ಅರಿವಿಗೆ ಇರುವ ದಾಖಲೆಗಳು, ಅಂಕಿಅಂಶಗಳು ಸಹ ಅಷ್ಟೇ ಮಹತ್ವದ ಪಾತ್ರವನ್ನು ವಹಿಸುತ್ತವೆ" ಎಂದು ಮೈಸೂರು ವಿಭಾಗೀಯ ಪತ್ರಾಗಾರ ಇಲಾಖೆಯ ಉಪನಿರ್ದೇಶಕರಾದ ಡಾ.ಗವಿಸಿದ್ಧಯ್ಯ ಅವರು ಅಭಿಪ್ರಾಯ ಪಟ್ಟರು. ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ ಇಂದು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

1973ರಲ್ಲಿ ವಿಭಾಗೀಯ ಪತ್ರಾಗಾರ ಕಛೇರಿ ದೇಶಿಕ್‌ಚಾರ್ ಅವರಿಂದ ಸ್ಥಾಪನೆಗೊಂಡು ಅದು ಬೆಳೆದುಬಂದ ಹಾದಿ, ಇಲಾಖೆಯಲ್ಲಿ ದೊರೆಯುವ ಅಂಕಿಅಂಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಇಲಾಖೆಯಲ್ಲಿ ಮೈಸೂರಿನ ಸುತ್ತಮುತ್ತ ಆಗಿರುವ ಹಲವಾರು ಯುದ್ಧಗಳು, ದಂಗೆಗಳು ಇನ್ನು ಮುಂತಾದವುಗಳ ಮಹತ್ವದ ದಾಖಲೆಗಳ ಪ್ರತಿಗಳನ್ನು ನಾವು ನೋಡಬಹುದಾಗಿದ್ದು ವಿಶ್ವವಿಖ್ಯಾತ ಮೈಸೂರು ದಸರಾದ ಪರಂಪರೆಯ ಬಗೆಗಿನ ದಾಖಲೆಗಳು ಸಹ ದೊರೆಯುತ್ತವೆ ಎಂದು ತಿಳಿಸಿದರು.

ಉಡುಪಿ ಅಷ್ಟಮಠದಲ್ಲೊಂದಾದ ಪೇಜಾವರ ಮಠದ ಹಿರಿಯ ಯತಿಗಳಾದ ಶ್ರೀ ವಿಶ್ವೇಶ ತೀರ್ಥರು ಕೃಷ್ಣೈಕ್ಯರಾದ ಪ್ರಯುಕ್ತ ರಾಜ್ಯಾದ್ಯಂತ ಶೋಕಾಚರಣೆ ಇರುವ ಕಾರಣ ಕಾರ್ಯಕ್ರಮದಲ್ಲಿ ಮೌನಾಚರಣೆಯನ್ನು ಆಚರಿಸಿ ಸರಳವಾಗಿ ಉಪನ್ಯಾಸ ಕಾರ್ಯಕ್ರಮವನ್ನು ಪ್ರಾರಂಬಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು, ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀಮತಿ.ಸವಿತಾ.ಕೆ.ಎಸ್, ಅಧ್ಯಾಪಕರು, ವಿದ್ಯಾಥಿಗಳು ಹಾಜರಿದ್ದು ಉಪನ್ಯಾಸದ ಉಪಯೋಗವನ್ನು ಪಡೆದುಕೊಂಡರು.

Vidyavardhaka First Grade College, Mysuru – Events, Special Talks, Seminars and Activities page





















